**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಅಪರ ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,**

**ಸಿ.ಸಿ. ಸಂಖ್ಯೆಃ 1308/2022**

**ಸಿ.ಡಬ್ಲ್ಯೂ: 28 /ಪಿ.ಡಬ್ಲ್ಯೂಃ 18**

**ಪ್ರಮಾಣೀಕರಿಸಿದ ದಿನಾಂಕಃ 2.7.25**

| | |
|---|---|
| **ಹೆಸರು** | ಕುಮಾರಸ್ವಾಮಿ |
| **ತಂದೆಯ ಹೆಸರು** | ರಾಮಯ್ಯ |
| **ವಯಸ್ಸು** | 46 ವರ್ಷ |
| **ವೃತ್ತಿ** | ಪಿ ಐ, ಡಿ ಸಿ ಆರ್ ಬಿ |
| **ಸ್ಥಳ** | ಬೆಂಗಳೂರು |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದಃ-**

ನಾನು ದಿಃ 14.3.2022 ರಿಂದ ದಿಃ 30.9.23 ರವರೆಗೆ ರಾಬರ್ಟಸನ್ ಪೇಟೆ ಪೊಲೀಸ್ ಠಾಣೆಯಲ್ಲಿ ಸಿ ಪಿ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 14.3.22 ರಂದು ಹಾಲಿ ಪ್ರಕರಣದ ಕಡತವನ್ನು ಚಾಸ-27 ರವರಿಂದ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಪಡೆದುಕೊಂಡಿರುತ್ತೇನೆ. ದಿಃ 30.3.22 ರಂದು ಚಾಸಾ1 ರವರ ರಕ್ತದ ಮಾದರಿಯನ್ನು ಸಂಗ್ರಹಿಸಿಕೊಡಲು ಕೆ ಜಿ ಎಫ್ ಸರ್ಕಾರಿ ಆಸ್ಪತ್ರೆ ವೈದ್ಯರಿಗೆ ಮನವಿ ಸಲ್ಲಿಸಿರುತ್ತೇನೆ. ಕೆಜಿಎಫ್ ವೈದ್ಯಾಧಿಕಾರಿಗಳು ಚಾಸಾ1 ರವರ ಎರಡು ರಕ್ತದ ಮಾದರಿಯನ್ನು ಸಂಗ್ರಹಿಸಿರುವುದನ್ನು ಚಾಸಾ25 ರವರು ಹಾಜರುಪಡಿಸಿ ವರದಿ ನೀಡಿರುತ್ತಾರೆ. ಸದರಿ ಎರಡು ರಕ್ತದ ಮಾದರಿಯನ್ನು ಠಾಣಾ ಮಾಲುಪಟ್ಟಿಯಲ್ಲಿ ನಮೂದು ಮಾಡಿರುತ್ತೇನೆ. ದಿಃ 8.4.22 ರ ಚಾಸಾ1 ರವರ ಗಾಯದ ಪ್ರಮಾಣಪತ್ರವನ್ನು ಪಡೆದಿರುತ್ತೇನೆ. ದಿಃ 20.4.22 ರಂದು ಚಾಸಾ1 ರವರ ಎರಡು ರಕ್ತದ ಮಾದರಿಯನ್ನು ಮತ್ತು ಅಮಾನತ್ತು ಪಡಿಸಿಕೊಂಡ ವಸ್ತುಗಳನ್ನು ಎಫ್ ಎಸ್ ಎಲ್ ಗೆ ಕಳುಹಿಸಿ, ಸ್ವೀಕೃತಿಯನ್ನೂ ಸಹ ಪಡೆದಿರುತ್ತೇನೆ. ದಿಃ 22.4.22 ರಂದು ಆರೋಪಿಗಳ ವಿರುದ್ದ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ದಿಃ10.5.22 ರಂದು ನ್ಯಾಯಾಲಯದ ಆದೇಶದಂತೆ ಪಂಚರ ಸಮಕ್ಷಮ ಚಾಸಾ1 ರವರಿಗೆ ಒಂದು ಬಂಗಾರದ ಮಾಂಗಲ್ಯದ ಸರ, ಒಂದು ಜೊತೆ ಬಳೆ ಮತ್ತು ಒಂದು ಜೊತೆ ಓಲೆಗಳನ್ನು ಬಿಡುಗಡೆ ಮಾಡಿರುತ್ತೇನೆ.

3. ಸಾಕ್ಷಿಯು ನಿಪಿ14 ರ ಗಾಯದ ಪ್ರಮಾಣಪತ್ರದಲ್ಲಿ ಸಹಿಯನ್ನು ನೋಡಿ ಗುರ್ತಿಸಿರುತ್ತಾರೆ. ಸದರಿ ಸಹಿಯನ್ನು ನಿಪಿ14 ಬಿ ಎಂದು ಗುರುತಿಸಲಾಯಿತು. ಸಾಕ್ಷಿಯು ಚಾಸಾ1 ರವರ ಗಾಯ ರಕ್ತದ ಮಾದರಿಯನ್ನು ಸಂಗ್ರಹಿಸಿಕೊಡಲು ಕೆ ಜಿ ಎಫ್ ಸರ್ಕಾರಿ ಆಸ್ಪತ್ರೆ ವೈದ್ಯರಿಗೆ ಕೊಟ್ಟ ಮನವಿ, ಚಾಸಾ25 ರವರು ಕೊಟ್ಟ ವರದಿ ಮತ್ತು ಎಫ್ ಎಸ್ ಎಲ್ ಸ್ವೀಕೃತಿಯ ದಾಖಲೆಗಳನ್ನು ಜೊತೆಗೆ ಸಹಿಗಳನ್ನು ನೋಡಿ ಗುರ್ತಿಸಿದ್ದು, ಅವುಗಳನ್ನು ನಿಪಿ15 ರಿಂದ 17 ಎಂದು ಸಾಕ್ಷಿ ಸಹಿಯನ್ನು ನಿಪಿ15 ಎ ಯಿಂದ ನಿಪಿ17 ಎ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಎರಡು ರಕ್ತದ ಕಂಟೇನರ್ ಗಳನ್ನು ನೋಡಿ ಗುರ್ತಿಸಿರುತ್ತಾರೆ.

ಪಾಟೀ ಸವಾಲುಃ- 1ನೇ ಆರೋಪಿ ಪರ ಶ್ರೀ ಎಸ್ ಆರ್ ಜೆ ವಕೀಲರಿಂದಃ-

4. ಎರಡು ರಕ್ತದ ಕಂಟೇನರ್ ಗಳ ಮೇಲೆ ಹಾಲಿ ಪ್ರಕರಣದ ಸಂಖ್ಯೆ ಬರೆದಿಲ್ಲ. ಎರಡು ರಕ್ತದ ಕಂಟೇನರ್ ಗಳ ಮೇಲೆ ನನ್ನ ಮತ್ತು ಸಾಕ್ಷಿದಾರರ ಸಹಿ ಇರುವುದಿಲ್ಲ. ನಾನು ಹೇಳಿದಂತೆ ಎರಡು ರಕ್ತದ ಕಂಟೇನರ್ ಗಳನ್ನು ಪರೀಕ್ಷೆಗಾಗಿ ಚಾಸಾ1ರವರಿಂದ ತೆಗೆದುಕೊಂಡು ಪರೀಕ್ಷೆಗಾಗಿ ಎಫ್ ಎಸ್ ಎಲ್ ಗೆ ಕಳಿಸಿಲ್ಲಎಂದರೆ ಸರಿಯಲ್ಲ. ಹಾಲಿ ಪ್ರಕರಣಕ್ಕೂ ಎರಡು ಕಂಟೇನರ್ ಗಳಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಚಾಸಾ1ರವರ ಗಾಯದ ಪ್ರಮಾಣಪತ್ರ ಪಡೆದಿಲ್ಲ ಎಂದರೆ ಸರಿಯಲ್ಲ. ಹಾಲಿ ಪ್ರಕರಣದಲ್ಲಿ ಆರೋಪಿ ವಿರುದ್ದ ಯಾವುದೇ ಆರೋಪಿ ಇಲ್ಲದೇ ಇದ್ದರೂ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

**(ಈ ಹಂತದಲ್ಲಿ ಶ್ರೀ ಜಿ ಡಿ ವಕೀಲರು 1ನೇ ಆರೋಪಿ ಪರ ವಕೀಲರು ಮಾಡಿದ ಪಾಟೀಸವಾಲನ್ನು 2ನೇ ಆರೋಪಿ ಪರ ವಕೀಲರು ಅಳವಡಿಸಿಕೊಳ್ಳಲು ಅನುಮತಿಸಿ ಕೋರಿರುತ್ತಾರೆ)**

ಮರುವಿಚಾರಣೆಃ- ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**(ವಿನೋದ್ ಕುಮಾರ್. ಎಂ)**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಅಪರ ಜೆ.ಎಂ.ಎಫ್.ಸಿ, ಕೆಜಿಎಫ್.**